

## ಸಾಂಪ್ರದಾಯಿಕ ರಂಗೋಲಿಗೆ ಹೈಟೆಕ್ ಸ್ಪರ್ಶ

# ಹೈಡೆಫಿನಿಷನ್ ರಂಗೋಲಿ!

**ಸಾಂಪ್ರದಾಯಿಕ ರಂಗೋಲಿಗೆ ಆಧುನಿಕತೆಯ ಸ್ಪರ್ಶ ದೊರೆತಿದೆ. ಇದೀಗ ಹೈಡೆಫಿನಿಷನ್ ರಂಗೋಲಿ, ರಿಯಲಿಸ್ಟಿಕ್ ರಂಗೋಲಿ, ತ್ರಿಡಿ ರಂಗೋಲಿ, ಫ್ಲ್ಯಾಷ್ ರಂಗೋಲಿಗಳು 'ಹೈಟೆಕ್ ರಂಗೋಲಿ'ಗಳಾಗಿ ಒಡಮೂಡಿದ್ದು, ವೃತ್ತಿಯಲ್ಲಿ ಪುರೋಹಿತರಾಗಿರುವ ಅಕ್ಷಯ್ ಜಾಲಿಹಾಳ ಆಚಾರ್ಯ ರಂಗೋಲಿ ವೈವಿಧ್ಯದಲ್ಲಿ ಅಚ್ಚರಿ ಮೂಡಿಸಿದ್ದಾರೆ.**

■ **ಉಮಾ ಅನಂತ್**

ಬೆಳಿಗ್ಗೆ ಮನೆಯ ಮುಂದೆ ನೀರು ಹಾಕಿ ರಂಗೋಲಿ ಹಾಕುವುದು ಮಹಿಳೆಯರ ದಿನಚರಿಗಳಲ್ಲೊಂದು. ಶುಭ ಸಮಾರಂಭಗಳಲ್ಲಿ ಚಪ್ಪರದ ಮುಂದೆ, ಕಲ್ಯಾಣ ಮಂಟಪಗಳ ಮುಂದೆ ಹಾಕುವ ಸಾಮಾನ್ಯ ರಂಗೋಲಿಗಳು ಕೂಡ ಸೃಜನಶೀಲತೆಯ ಸಂಕೇತ.

ರಂಗೋಲಿಯಲ್ಲೂ ಅದೆಷ್ಟು ವೈವಿಧ್ಯ. ಪುಡಿ ರಂಗೋಲಿ, ಚುಕ್ಕಿ ರಂಗೋಲಿ, ರೇಖೆ ರಂಗೋಲಿ, ಚಾಕ್‌ಪೀಸ್ ರಂಗೋಲಿ, ಹೂವಿನ ಎಸಳುಗಳ ರಂಗೋಲಿ, ಧಾನ್ಯಗಳನ್ನು ಬಳಸಿ ಮಾಡುವ ರಂಗೋಲಿ... ಹೀಗೆ. ಹೇಳಿಕೇಳಿ ಇದು ಡಿಜಿಟಲ್ ಯುಗ. ತಂತ್ರಜ್ಞಾನ ನಾಗಾಲೋಟದಲ್ಲಿ ಓಡುತ್ತಿರುವ ಸಮಯ. ಎಲ್ಲ ಕ್ಷೇತ್ರಗಳಲ್ಲೂ ಹೈಟೆಕ್ ಸಂಸ್ಕೃತಿ ಸದ್ದು ಮಾಡುತ್ತಿರುವಾಗ ಸಾಂಪ್ರದಾಯಿಕತೆಗೆ ಆಧುನಿಕ ಸ್ಪರ್ಶ ನೀಡದಿದ್ದರೆ ಹೇಗೆ? ಅದರಲ್ಲೂ ಸಾಂಪ್ರದಾಯಿಕ ರಂಗೋಲಿ ಈಗ ಹೈಟೆಕ್‌ನಿಂದ ಆಕರ್ಷಣೀಯವಾಗಿದೆ.

ಮೂಲತಃ ಬಾಗಲಕೋಟೆಯವರಾಗಿದ್ದು, ಸದ್ಯ ಬೆಂಗಳೂರಿನ ಚಂದಾಪುರದಲ್ಲಿರುವ ಅಕ್ಷಯ ಜಾಲಿಹಾಳ ಆಚಾರ್ಯ ಹೈಡೆಫಿನಿಷನ್ ರಂಗೋಲಿ ಮಾಡಿ ಅಚ್ಚರಿ ಮೂಡಿಸಿದ್ದಾರೆ. ಸಂಸ್ಕೃತದಲ್ಲಿ ತಂತ್ರಸಾರ ಆಗಮ ಪದವಿ, ಅಲಂಕಾರ ಶಾಸ್ತ್ರ, ವಿದ್ವತ್, ಸಂಸ್ಕೃತ ಎಂಎ ಮಾಡಿಕೊಂಡಿರುವ ಅಕ್ಷಯ್‌ಗೆ ರಂಗೋಲಿಯಲ್ಲಿ 'ಸ್ಪೆಷಲಿಸ್ಟ್' ಆಗುವ ಬಯಕೆ. ಇದಕ್ಕೆ ಕಾರಣವೂ ಇದೆ. ಚಿಕ್ಕಂದಿನಿಂದಲೂ ಪೇಜಾವರ ಮಠಾಧೀಶರು ಪುಣೆಯಲ್ಲಿ ಸ್ಥಾಪಿಸಿದ ವಿದ್ಯಾಪೀಠದಲ್ಲಿಯೇ ಇದ್ದುಕೊಂಡು ಕಲಿತವರು. ವೇದಾಧ್ಯಯನ, ಸಂಸ್ಕೃತ ಶ್ಲೋಕ, ಪಾರಾಯಣ, ಪೂಜೆ, ಹೋಮ, ಹವನಗಳಲ್ಲಿ ಮುಖ್ಯ ಪುರೋಹಿತರಿಗೆ ಸಹಕರಿಸುತ್ತಾ ಇದ್ದವರು. ದುರ್ಗಾಪೂಜೆ, ಸತ್ಯನಾರಾಯಣ ಪೂಜೆ, ಗಣಪತಿ ಪೂಜೆ, ಹೋಮಗಳು... ಹೀಗೆ ಯಾವುದೇ ದೇವತಾಕಾರ್ಯಗಳು ನಡೆಯುವುದಿದ್ದರೂ ರಂಗೋಲಿ ಪುಡಿಯಿಂದ ಮಂಡಲಗಳನ್ನು ಬರೆಯುವುದು ಪದ್ಧತಿ.